**Code No. 06 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು — ಪ್ರವೀಣ ದರ್ಜೆ — ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗಿನ ಲೇಖನವನ್ನು 10 ರಿಂದ 70 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು, ಹಾಳೆಯ ಒಂದೇ ಕಡೆ ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಿ.
2) ಸಾಲುಗಳ ಕೊನೆಯಲ್ಲಿ ಇದರ ಅಂಕಿಗಳನ್ನು ಬೆರಳಚ್ಚು ಮಾಡಬಾರದು.
3) **]** ಈ ಚಿಹ್ನೆ ಇರುವಲ್ಲಿಯವರೆಗೂ ಬೆರಳಚ್ಚು ಮಾಡಿ. ಒಂದು ವೇಳೆ ಚಿಹ್ನೆಗಿಂತ ಇನ್ನೂ ಹೆಚ್ಚು ಬೆರಳಚ್ಚು ಮಾಡಿದಲ್ಲಿ ಅರ್ಹತಾ ಪತ್ರದಲ್ಲಿ ವೇಗವನ್ನು ನಮೂದಿಸಲು ಮಾತ್ರ ಪರಿಗಣಿಸಲಾಗುವುದು.

ನಗರದ ಹೆಸರಾಂತ ಕಾಲೇಜೊಂದರ ಮುಂದಿನ ವೃತ್ತದಲ್ಲಿ ಹೊಸ ಸಿನೆಮಾವೊಂದರ 60
ಭಿತ್ತಿಪತ್ರವು ರಾರಾಜಿಸುತ್ತಿದೆ. ಅದರಲ್ಲಿ ಇಂದಿನ ಯುವ ಜನತೆಯು ತಪ್ಪದೆ ನೋಡಬೇಕಾದ 129
ಚಿತ್ರ ಎಂದು ಕಣ್ಣಿಗೆ ರಾಚುವ ಹಾಗೆ ಬರೆದಿರುವ ವಾಕ್ಯವು ಅಂದು ಕಾಲೇಜಿನ ಯುವಕ 190
ಯುವತಿಯರ ಚರ್ಚೆಗೆ ಮುಖ್ಯ ಗ್ರಾಸವಾಗಿದೆ ಎಂಬುದು ನೋಡುತ್ತಲೇ ತಿಳಿಯುತ್ತದೆ. 255
ಇದು ನಗರವೊಂದಕ್ಕೆ ಸೀಮಿತವಾದ ವಿಷಯವೆಂದರೆ ತಪ್ಪಾದೀತು. ಏಕೆಂದರೆ ಇಂದು 317
ಚಲನಚಿತ್ರ ಮಾಧ್ಯಮ ಜನರ ಮೇಲೆ ಬೀರಿರುವ ಪರಿಣಾಮ ಅಪಾರ. ಹಿಂದೆ ಒಂದಾನೊಂದು 382
ಕಾಲದಲ್ಲಿ ಜನಪ್ರಿಯವಾಗಿದ್ದ ರಂಗಭೂಮಿಯನ್ನು ಹಿಂದೆ ಹಾಕಿ ಎಲ್ಲಾ ಗಮನವನ್ನು 440
ತನ್ನತ್ತ ಸೆಳೆದುಕೊಂಡ ಈ ಮಾಧ್ಯಮ ಇಂದಿನ ದಿನಗಳಲ್ಲಿ ಸೃಷ್ಟಿಸುತ್ತಿರುವ ಪರಿಣಾಮಗಳು 506
ಆತಂಕಕಾರಿಯಾದದ್ದು. ಚಲನ ಚಿತ್ರಗಳು ಇಂದು ಹೆಚ್ಚಾಗಿ ಪೋಷಿಸುತ್ತಿರುವುದು 564
ನಮ್ಮಂಥ ಬಿಸಿರಕ್ತದವರಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ಮನೆಯಲ್ಲಿ ನಾವು 627
ಕಾಡಿ ಬೇಡಿ ದೊರಕಿಸಿಕೊಂಡ ಪಾಕೆಟ್ ಮನಿಯನ್ನು ನಮ್ಮಿಂದ ಧಾರಾಳವಾಗಿ ಹಾಗೂ 689
ಅನಾಯಾಸವಾಗಿ ಪಡೆಯುವ ಸಿನಿಮಾ ಮನರಂಜನೆಯ ಹೆಸರಿನಲ್ಲಿ ಏನನ್ನು ನೀಡುತ್ತಿದೆ. 753

[ Turn over

ಜೀವನದಲ್ಲಿ ಯಶಸ್ವಿಯಾಗಿ ಹೋರಾಡುವ ಯುವ ಪೀಳಿಗೆಯವರು ಅದಕ್ಕಾಗಿ ತಮ್ಮಲ್ಲಿನ 819
ಪ್ರತಿಭೆಯೆಲ್ಲವನ್ನೂ ಉಪಯೋಗಿಸಿಕೊಳ್ಳುತ್ತಾರೆ ಅಲ್ಲವೆ. ಆದರೆ ಇದು ಎಲ್ಲಾ 880
ಸಮಯದಲ್ಲೂ ಫಲಕಾರಿಯಾಗುವ ಸಾಧ್ಯತೆಗಳು ಇರುವುದಿಲ್ಲ. ಆಗ ಅವರ ಮನದಾಳದಲ್ಲಿ 944
ವಿಫಲತೆಯ ಬಗ್ಗೆ ತಿರಸ್ಕಾರ ಮನೋಭಾವ ರೂಪುಗೊಳ್ಳುತ್ತದೆ. 995

ಸಿನಿಮಾಗಳಲ್ಲಿ ಅನ್ಯಾಯದ ವಿರುದ್ಧ ಸಿಡಿದೇಳುವ, ಸೋಲನ್ನೇ ಅರಿಯದ ನಾಯಕರುಗಳು 1066
ಅವರನ್ನು ಆಕರ್ಷಿಸುತ್ತಾರೆ. ಕ್ರಮೇಣ ಅವರ ಚಿತ್ರಗಳನ್ನು ನೋಡುವ ಮೂಲಕ ಅಥವಾ 1131
ಅವರ ಅಭಿಮಾನಿಗಳಾಗುವ ಮೂಲಕ ಬಹುತೇಕ ಯುವಜನತೆ ತನ್ನ ಹಂಬಲದ ಹಸಿವನ್ನು 1191
ಇಂಗಿಸಿಕೊಳ್ಳಲಿಚ್ಛಿಸುತ್ತದೆ. ತಾವು ಮಾಡಲಾಗದ ಮಹತ್ಕಾರ್ಯಗಳನ್ನು ಆ ಕಾಲ್ಪನಿಕ 1251
ಪಾತ್ರದ ಮೂಲಕ ನೋಡಿ ತೃಪ್ತಿಪಟ್ಟುಕೊಳ್ಳುತ್ತಾರೆ. ಈ ರೀತಿ ಚಲನಚಿತ್ರವು 1311
ಯುವಕರಲ್ಲಿ ಹೊರಾಡುವ ಛಲ, ಆತ್ಮವಿಶ್ವಾಸ ತುಂಬುತ್ತದೆ ಎಂದು ಭಾವಿಸಿದ್ದರೆ ನಿಮ್ಮ 1376
ಊಹೆ ಸುಳ್ಳಾಗುತ್ತದೆ. ಬದಲಾಗಿ ಇದರಿಂದ ಹೆಚ್ಚುತ್ತಿರುವುದು ಗೂಂಡಾಗಿರಿ, ಮೋಸಗಾರಿಕೆ 1441
ಮತ್ತು ಕೊಲೆಗಳಷ್ಟೆ ಅಲ್ಲವೇ ? ಚಲನಚಿತ್ರಗಳಲ್ಲಿ ಹಿಂಸೆ ಮತ್ತು ಸೆಕ್ಸ್ ಇವೆರಡನ್ನೂ 1507
ಅತಿಯಾಗಿ ವೈಭವೀಕರಿಸುತ್ತಿರುವುದು ಇಂದಿನ ಯುವಜನತೆಯ ಮೇಲೆ ಅಪಾರ ಪರಿಣಾಮ 1570
ಬೀರುತ್ತಿದೆ. ಮುಂದುವರಿದ ಆಧುನಿಕ ತಾಂತ್ರಿಕ ಕೌಶಲ್ಯವು ನೃತ್ಯ ಮತ್ತು ಹೊಡೆದಾಟಗಳ 1635
ಯಾವ ದೃಶ್ಯವೇ ಆಗಲಿ ನೋಡುತ್ತಿರುವವರ ಕಣ್ಣು ಹುಬ್ಬೇರಿಸುವಂತೆ ಮಾಡುತ್ತದೆ. 1698
ಹಿಂದಿನ ಕಾಲದ ಚಿತ್ರಗಳಲ್ಲಿ ಈ ರೀತಿಯ ವೈಭವೀಕರಣ ಇರಲಿಲ್ಲವಾದರೂ ಅವುಗಳನ್ನು ನಿರ್ಮಿಸುವುದರ 1770
ಹಿಂದೆ ಏನಾದರೂ ಸದುದ್ದೇಶವಿರುತ್ತಿತ್ತು. ಕಟುವಾಗಿ ಹೇಳಬೇಕೆಂದರೆ ಚಲನಚಿತ್ರಗಳು 1834
ದೇಶಕ್ಕೆ ಇಂದು ಅವಶ್ಯಕವಾದ ಭಾವೀ ಪ್ರಜೆಗಳನ್ನು ನಿರ್ಮಾಣ ಮಾಡುವಲ್ಲಿ ಗಣನೀಯವಾದ 1899
ಸಾಧನೆ ಮಾಡಿ ತೋರಿಸಬಹುದು. ಆದರೆ ಈ ದಿನ ಚಲನಚಿತ್ರೋದ್ಯಮ ತಾನೇ ಅಧಃಪತನಕ್ಕೆ 1970
ಇಳಿಯುವುದರ ಜೊತೆಗೆ ಯುವಜನತೆಯ ಮೂಲಭೂತ ಸ್ವನಿಲುವುಗಳ ಹಳಿ ತಪ್ಪಿಸುತ್ತಿದೆ ಎಂದು 2040
ಹೇಳಬಹುದಾಗಿದೆ. ಇತ್ತೀಚೆಗೆ ಬಿಡುಗಡೆಯಾಗುತ್ತಿರುವ ಚಲನಚಿತ್ರಗಳೆಲ್ಲಾ ಪೊಲೀಸರಿಗೆ 2109

ಸಂಬಂಧಪಟ್ಟಿದ್ದೇ ಆಗಿದೆ. ಇಂತಹ ಚಿತ್ರಗಳಲ್ಲಿ ಪೊಲೀಸರ ದೌರ್ಜನ್ಯಗಳನ್ನು ವೀಕ್ಷಿಸಿದ 2174
ಪ್ರೇಕ್ಷಕರಿಗೆ ಅವರ ಮೇಲೆ ಇರಬಹುದಾಗಿದ್ದ ಸದಭಿಪ್ರಾಯಗಳು ನಾಶವಾಗುವ ಸಾಧ್ಯತೆ 2238
ಬಹಳವಾಗಿರುತ್ತದೆ. ಇದು ಸಿನಿಮಾ ಜನರ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳನ್ನು 2300
ನಿರೂಪಿಸುವ ಸಾಮಾನ್ಯ ಉದಾಹರಣೆಯಷ್ಟೆ. ಹೀಗೆ ಉದಾಹರಣೆಗಳನ್ನು ಕೊಡುತ್ತಿದ್ದರೆ 2364
ಬೇಕಾದಷ್ಟು ಸಿಗುತ್ತವೆ. ಅದರ ಪ್ರಯೋಜನಗಳು ಬೆರಳಣಿಕೆಯಷ್ಟು ಮಾತ್ರ. 2427

ಇನ್ನು ಚಿತ್ರ ಸಾಹಿತ್ಯದ ವಿಷಯಕ್ಕೆ ಬಂದರೆ ಹೇಳದಿರುವುದೇ ಲೇಸು. ಎಲ್ಲಾ ಭಾಷೆಯ 2498
ಚಿತ್ರಗಳಲ್ಲಿ, ಕೀಳು ಸಾಹಿತ್ಯದ ದುರ್ಗಂಧ ಪಾರ್ಥೇನಿಯಂ ತರಹ ಹರಡಿಬಿಟ್ಟಿದೆ. ಮೇಲಾಗಿ 2567
ಕೆಲವು ಸಿನಿಮಾಗಳು ಕೀಳು ಸಾಹಿತ್ಯದ ಅಭಿರುಚಿಯನ್ನು ಪ್ರೇಕ್ಷಕರಲ್ಲಿ ಬೆಳೆಸುವುದಕ್ಕೆ 2630
ಪ್ರಯತ್ನಿಸುತ್ತಿರುವಂತೆ ತೋರುತ್ತಿದೆ. ಇದರಿಂದಾಗಿ ನಮಗಿಂತ ಹಿರಿಯರ ಅಥವಾ 2690
ಆತ್ಮೀಯರ ಜೊತೆ ಸಿನಿಮಾ ನೋಡಲು ಸಹಜವಾಗಿಯೇ ನಮಗೆ ಒಂದು ರೀತಿಯ 2750
ಮುಜುಗರವಾಗುತ್ತದೆ. ಆದರೆ ಮರಳುಗಾಡಿನ ಓಯಸಿಸ್‌ನಂತೆ ಸದಭಿರುಚಿಯ ಚಿತ್ರಗಳು 2814
ಬರುತ್ತಿವೆಯಾದರೂ ಅವುಗಳ ಸಂಖ್ಯೆ ತೀರಾ ವಿರಳ. ಚಲನಚಿತ್ರಗಳ ಬಗೆಗಿನ ಟೀಕೆಗಳು 2875
ಸಂಬಂಧಪಟ್ಟ ಉದ್ಯಮದವರ ಹುಬ್ಬುಗಂಟಿಕ್ಕಿಸಬಹುದು. ಅಲ್ಲದೆ ಚಲನಚಿತ್ರಗಳನ್ನು 2932
ನೋಡುವುದರಿಂದ ತಮ್ಮ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ತೊಂದರೆಯುಂಟಾಗಿಲ್ಲ 2997
ವೆಂದು ಅನೇಕ ಯಶಸ್ವಿ ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ. ಇದು ನಿಜವಿರಬಹುದು. 3065
ಓದಿನಲ್ಲಿ ಆಸಕ್ತಿ ಹೊಂದಿದ ವಿದ್ಯಾರ್ಥಿಗೆ ಚಲನಚಿತ್ರಗಳೇನು ಯಾವುದೇ ರೀತಿಯ ಹವ್ಯಾಸಗಳು 3134
ಹಾನಿಮಾಡದಿರಬಹುದು. ಆದರೆ ಅವುಗಳು ಪರಿಣಾಮ ಬೀರುವುದು ಅನೇಕ ವಿಚಾರಧಾರೆಗಳ ಮೇಲೆ 3200
ಹಾಗೂ ಆತನ ಭವಿಷ್ಯತ್ತಿನಲ್ಲಿಯ ನಿಲುವುಗಳ ಮೇಲೆ. ಚಿತ್ರರಂಗವು ತನ್ನ ಮಾಮೂಲಿ 3263
ವರಸೆಯ ಮಸಾಲೆ ಫಾರ್ಮುಲಾಗಳನ್ನು ಬಿಟ್ಟು, ಅದರ ಬದಲಿಗೆ ಜನರನ್ನು ಚಿಂತನೆಗೆ 3324
ಹಚ್ಚುವಂತಹ ಚಿತ್ರಕತೆಗಳನ್ನೇ ಮನರಂಜನೆಯ ಲೇಪದೊಂದಿಗೆ ನಿರೂಪಿಸಬಹುದಲ್ಲವೇ. 3385
ಸಂದೀಲಿ ಸಮಾರಾಧನೆ ಎನ್ನುವಂತೆ ಒಂದರ ಹಿಂದೊಂದು ಒಂದೇ ಮಾದರಿಯ ಚಿತ್ರಗಳು 3448

ಬಂದು ವಿಫಲತೆಯ ಪ್ರವಾಹದಲ್ಲಿ ಕೊಚ್ಚಿ ಹೋಗುವುದರ ಬದಲು ಹೊಸ ಹೊಸ 3507
ಪ್ರಯೋಗಗಳನ್ನು ಮಾಡಿ ನೋಡಬಹುದು. 3539

ಇಷ್ಟು ಹೇಳಿದ ನಂತರ ಚಿತ್ರೋದ್ಯಮದವರ ಕಡೆಗೂ ಕೊಂಚ ಗಮನ ಕೊಡಬೇಕಾಗು 3607
ತ್ತದೆ. ಸಿನಿಮಾ ನಿರ್ಮಾಣವೆಂಬುದು ಸುಲಭದ ಮಾತಲ್ಲ. ಯಾರೇ ಆಗಲಿ ತಾವು ತೆಗೆಯ 3663
ಬಯಸುವ ಚಿತ್ರ ಯಶಸ್ವಿಯಾಗಲೆಂದು ಬಯಸುತ್ತಾರೆ. ಈ ಸಲುವಾಗಿ ಜನಗಳನ್ನು 3734
ಆಕರ್ಷಿಸಲು ಆಗತ್ಯವಾದ ] ಮಸಾಲೆಗಳ ಮೊರೆ ಹೋಗುವುದರಲ್ಲಿ ತಪ್ಪೇನು, ಇದು ಅವರು 3806
ಕೇಳುವ ಪ್ರಶ್ನೆ. ಒಟ್ಟಿನಲ್ಲಿ ಇದೊಂದು ಪರಿಹಾರ ಸಿಗದ ಸಮಸ್ಯೆಯಾಗಿಬಿಡುವ ಸಾಧ್ಯತೆಗಳು 3873
ಇಲ್ಲದಿಲ್ಲ. ಚಿತ್ರರಂಗದಲ್ಲಿಯ ದೈತ್ಯ ಪ್ರತಿಭೆಗಳು ಆದಷ್ಟೂ ಇಂತಹ ಅಪಾಯಕಾರಿ 3938
ಪ್ರಯತ್ನಗಳನ್ನು ತಡೆದು ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಕಾತರರಾಗಿರುವ ಕಿರಿಯರಿಗೆ 3993
ತಾವು ನಡೆದು ಬಂದ ಹಾದಿಯನ್ನು ಮನಗಾಣಿಸಿ ಸರಿಯಾದ ಮಾರ್ಗದರ್ಶನ ಒದಗಿಸಬೇಕು. 4061
ಇಲ್ಲವಾದಲ್ಲಿ ಮದ್ಯಪಾನ, ಧೂಮಪಾನಗಳಂತೆಯೇ ಸಿನಿಮಾ ನೋಡುವುದು ಕೂಡ ಇಂದಿನ 4123
ಯುವ ಜನತೆಯ ದುರ್ವ್ಯಸನಗಳಲ್ಲಿ ಒಂದಾಗಬಹುದು.

ಕನ್ನಡ ಚಲನಚಿತ್ರಗಳಿಗೆ ಮನರಂಜನಾ ತೆರಿಗೆಯಿಂದ ಸಂಪೂರ್ಣ ವಿನಾಯಿತಿಯನ್ನು 4219
ನೀಡುವ ಮತ್ತು ಅಶ್ಲೀಲ, ದ್ವಂದ್ವಾರ್ಥ, ಹಿಂಸೆಯನ್ನು ವೈಭವೀಕರಿಸುವ ಚಿತ್ರಗಳಿಗೆ 4281
ಸಹಾಯ ಧನವನ್ನು ಸ್ಥಗಿತಗೊಳಿಸುವ ಮಹತ್ವದ ನಿರ್ಧಾರವನ್ನು ಅರ್ಥ ಸಚಿವರು ಇಂದು 4345
ಪ್ರಕಟಿಸಿದರು. ವಿಧಾನಮಂಡಲದಲ್ಲಿ ಇಂದು ಮಂಡಿಸಿದ ಆಯವ್ಯಯ ಮುಂಗಡ 4400
ಪತ್ರದಲ್ಲಿ ಸರ್ಕಾರದ ಈ ನಿಲುವನ್ನು ಪ್ರಕಟಿಸಿದ ಅವರು ಇದುವರೆಗೆ ಶೇಕಡಾ ಐವತ್ತು 4461
ಮನರಂಜನಾ ತೆರಿಗೆ ವಿನಾಯಿತಿಯನ್ನು ನೀಡಲಾಗಿತ್ತು. 4500